# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ಆಯುಕ್ತರು/ಟಿ-274/2015-16
No. :

ದಿನಾಂಕ : 16/10/2015
Date :

ಆಯುಕ್ತರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

## ಸುತ್ತೋಲೆ

ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ಸದಸ್ಯರ ವಿಭಾಗದ ನಕ್ಷೆ ಮಂಜೂರಾತಿ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ:-
1. ಮುಖ್ಯಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ದಿನಾಂಕ: 02.06.015 ರಂದು ಬೆಂಗಳೂರು ನಗರದ ಬಗ್ಗೆ ನಡೆಸಿದ ಸಭೆಯ ನಡವಳಿಯ ಬಗ್ಗೆ.
2. ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಡಿ.ಒ ಪತ್ರ ಸಂಖ್ಯೆ: ACS 312 UDD 2015, Dated: 04.07.2015.
3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಸುತ್ತೋಲೆ ಸಂಖ್ಯೆ: ಹೆನಿಯೋ/ಜೆ.ಡಿ(ಉ)/ಡಿಎಮ್3/ಪಿಆರ್/320/2015-16, ದಿನಾಂಕ: 04.09.2015.
4. ಸಂಖ್ಯೆ: ಬೆಂ.ಅ.ಪ್ರಾ/ಆಯುಕ್ತರು/105/2008-09, ದಿನಾಂಕ: 04.10.2008
5. ಸಂಖ್ಯೆ: ಬೆಂ.ಅ.ಪ್ರಾ/ಆಯುಕ್ತರು/ಟಿ-263/2015-16, ದಿನಾಂಕ: 07.10.2015.

*****

ಬೆಂಗಳೂರು ಅಭಿವೃದ್ಧಿ ಪ್ರಾದಿಕಾರದ ವ್ಯಾಪ್ತಿಯಲ್ಲಿ ಬರುವ ವಿವಿಧ ಬಗೆಯ ಕಟ್ಟಡಗಳ ನಿರ್ಮಾಣಕ್ಕೆ ನಕ್ಷೆಗಳನ್ನು ಅನುಮೋದಿಸುವಾಗ ವಿಧಿಸಬಹುದಾದ ಶುಲ್ಕಗಳನ್ನು ಉಲ್ಲೇಖ (4) ರ ಸುತ್ತೋಲೆಯಲ್ಲಿ ನಿಗಧಿಪಡಿಸಲಾದ ದರಗಳಂತೆ ಇದುವರೆವಿಗೂ ಪಾವತಿಸಲಾಗುತ್ತಿರುತ್ತದೆ. ಸದರಿ ಸುತ್ತೋಲೆಯನ್ನು ಪ್ರಾಧಿಕಾರದ ಸಭೆಯ ನಡವಳಿ ಸಂಖ್ಯೆ: 509/08, ದಿನಾಂಕ: 15.09.2008 ರಂತೆ ಅಂದಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಧಿಸಿದ ಶುಲ್ಕದ ಅನುಸಾರ ಹೊರಡಿಸಲಾಗಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಅಧಿನಿಯಮ 29 ರಲ್ಲಿ ಉಲ್ಲೇಖಿಸಿರುವಂತೆ ನಗರ ಪಾಲಿಕೆಯು ಕೆ.ಎಂ.ಸಿ. ಕಾಯ್ದೆ 1976 ಅಡಿಯಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಪ್ರಾಧಿಕಾರವು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಮುಂದುವರೆದಂತೆ ಪ್ರಾಧಿಕಾರದಲ್ಲಿ ಈವರೆವಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವಾಗ ಹಾಗೂ ಸ್ವಾಧೀನಾನುಭವ ಪತ್ರಗಳನ್ನು ನೀಡುವಾಗ ಯಾವುದೇ ಶುಲ್ಕಗಳನ್ನು ಪಾವತಿಸಿಕೊಳ್ಳುತ್ತಿರುವುದಿಲ್ಲ. ಇನ್ನು ಮುಂದೆ ಪ್ರಾಧಿಕಾರದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಸ್ವಾಧೀನಾನುಭವ ಪತ್ರ ನೀಡುವಾಗ ಶುಲ್ಕಗಳನ್ನು ಪಾವತಿಸಿಕೊಳ್ಳಲು ಉದ್ದೇಶಿಸಲಾಗಿದೆ. ಅದರಂತೆ ಉಲ್ಲೇಖ (3) ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಹೊರಡಿಸಲಾಗಿರುವ ಸುತ್ತೋಲೆಯಲ್ಲಿನ



ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdiah Road, Kumarapark West, Bangalore - 560 020. Facsimile : 2334 5799, E-mail : bda@vsnl.com

ಶುಲ್ಕಗಳನ್ನು ಪ್ರಾಧಿಕಾರದಲ್ಲಿ ಅಳವಡಿಸಿಕೊಳ್ಳಲು ಉದ್ದೇಶಿಸಿರುವ ವಿವರಗಳನ್ನು ಅನುಬಂಧ-1, 2 ಹಾಗೂ 3 ರಲ್ಲಿ ನಮೂದಿಸಲಾಗಿದೆ. ಪ್ರಾಧಿಕಾರದಿಂದ ನಕ್ಷೆ ಮಂಜೂರಾತಿ ಹಾಗೂ ಇತರೇ ಶುಲ್ಕಗಳನ್ನು ಪಾವತಿಸಿಕೊಳ್ಳಲು ಸಂಖ್ಯೆ: ಬೆಂ.ಅ.ಪ್ರಾ/ಆಯುಕ್ತರು/ಟಿ-263/2015-16, ದಿನಾಂಕ: 07.10.2015 ರಂದು ಪರಿಷ್ಕರಿಸಿ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ ಅನುಬಂಧ-1 ರಲ್ಲಿನ ಪರಿಶೀಲನಾ ಶುಲ್ಕವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಂಡಿದ್ದ ದರಗಳಂತೆ ಪಾವತಿಸಿಕೊಳ್ಳಲು ಸೂಚಿಸಲಾಗಿತ್ತು. ಈವರೆವಿಗೆ ಪ್ರಾಧಿಕಾರದಿಂದ ಪರಿಶೀಲನಾ ಶುಲ್ಕ ಹಾಗೂ ನೆಲಬಾಡಿಗೆಯನ್ನು ಒಂದೇ ದರದಲ್ಲಿ ಪಾವತಿಸಿಕೊಳ್ಳಲಾಗುತ್ತಿದ್ದು, ಪರಿಶೀಲನಾ ಶುಲ್ಕವನ್ನು ವಸತಿ ಹಾಗೂ ವಸತಿಯೇತರ ಕಟ್ಟಡಗಳಿಗೆ ಪಾವತಿಸಿಕೊಳ್ಳಲಾಗುತ್ತಿದ್ದ ಶೇಕಡವಾರು ದರವು 0.09 % ಇದ್ದು, ಸದರಿ ದರದಂತೆ ಪರಿಶೀಲನಾ ಶುಲ್ಕವನ್ನು ಪಾವತಿಸಿಕೊಳ್ಳಲು ದಿನಾಂಕ: 07.10.2015 ರಂದು ಹೊರಡಿಸಲಾದ ಸುತ್ತೋಲೆಯನ್ನು ಭಾಗಶಃ ಮಾರ್ಪಡಿಸಿ ಪಾವತಿಸಿಕೊಳ್ಳಲು ಹಾಗೂ ಇತರೇ ಶುಲ್ಕಗಳನ್ನು ಈ ಹಿಂದೆ ಹೊರಡಿಸಲಾದ ಉಲ್ಲೇಖ (5) ರ ಸುತ್ತೋಲೆಯಂತೆ ಪಾವತಿಸಿಕೊಳ್ಳಬಹುದಾದ ವಿವರಗಳು ಈ ಕೆಳಕಂಡಂತಿವೆ.

## ಅನುಬಂಧ-1

| ಕ್ರಮ ಸಂಖ್ಯೆ | ಶುಲ್ಕಗಳ ವಿವರ (ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ) | ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಗಳಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತೀ ಚ.ಮೀ ಗೆ (ಮಾರ್ಗಸೂಚಿ ದರದ ಶೇಕಡಾವಾರು ಪ್ರಮಾಣ) | | |
|---|---|---|---|---|
| | | ವಸತಿ | ವಸತಿಯೇತರ / ವಾಣಿಜ್ಯ | ಕೈಗಾರಿಕೆ |
| 1 | 2 | 3 | 4 | 5 |
| **I** ನಕ್ಷೆ ಮಂಜೂರಾತಿ ಹಂತ | | | | |
| ಅ) ಏಕವಸತಿ ಕಟ್ಟಡ | | | | |
| 1 | ಪರಿಶೀಲನಾ ಶುಲ್ಕ | 0.0109% | - | - |
| 2 | ನೆಲಬಾಡಿಗೆ 100 ಚ.ಮೀ ವರೆಗೆ | 0.021% | - | - |
| 3 | ನೆಲಬಾಡಿಗೆ 101 ಚ.ಮೀ ಯಿಂದ 250 ಚ.ಮೀ ವರೆಗೆ | 0.032% | - | - |
| 3 | ನೆಲಬಾಡಿಗೆ 250 ಚ.ಮೀ ಮೇಲ್ಪಟ್ಟು | 0.043% | - | - |
| ಆ) ಬಹುವಸತಿ ಕಟ್ಟಡ ಹಾಗೂ ವಸತಿಯೇತರ / ವಾಣಿಜ್ಯ ಕಟ್ಟಡ | | | | |
| 1 | ಪರಿಶೀಲನಾ ಶುಲ್ಕ | 0.09% | 0.09% | 0.09% |
| 2 | ನೆಲಬಾಡಿಗೆ | 0.09% | 0.22% | 0.22% |

| II ಪ್ರಾರಂಭಿಕ ಪ್ರಮಾಣ ಪತ್ರ ಹಂತ | | | | |
|---|---|---|---|---|
| 3 | ಪ್ರಾರಂಭಿಕ ಪ್ರಮಾಣ ಪತ್ರ ಶುಲ್ಕ | 0.11% | 0.18% | 0.18% |

**ಸೂಚನೆ:** ಮಾರ್ಗಸೂಚಿ ದರ "ಅಂದರೆ (ಶುಲ್ಕಗಳ ಲೆಕ್ಕಾಚಾರದ ಉದ್ದೇಶಕ್ಕಾಗಿ)

1. ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಸೆಕ್ಷನ್ 45 (ಬಿ) ಅಡಿಯಲ್ಲಿ ನಿರ್ದಿಷ್ಟ ನಿವೇಸನ / ಸ್ವತ್ತಿಗೆ ನಿಗಧಿಪಡಿಸಲಾದ ಹಾಲಿ ಚಾಲ್ತಿಯಲ್ಲಿರುವ ಚ.ಮೀ ಒಂದರ ಮಾರ್ಗಸೂಚಿ ದರ.
2. ದರ ನಿಗಧಿಪಡಿಸುವಲ್ಲಿ ಇರುವ ವಿಶೇಷ ಸೂಚನೆಗಳನ್ನು ಅಳವಡಿಸಿ ದರ ಪರಿಗಣಿಸುವುದು.
3. ಒಂದು ವೇಳೆ ನಿವೇಶನದ ಮಾರ್ಗಸೂಚಿ ದರ ಚ.ಮೀ ಒಂದಕ್ಕೆ ರೂ. 50,000/- ಗಳಿಗಿಂತ ಕಡಿಮೆ ಬಂದಲ್ಲಿ ಕನಿಷ್ಠ ರೂ. 50,000/- ಗಳನ್ನು ಚ.ಮೀ ಒಂದರ ಸ್ವತ್ತಿನ ಮಾರ್ಗಸೂಚಿ ದರವನ್ನಾಗಿ ಪರಿಗಣಿಸಿ ಅದರನ್ವಯ ಶುಲ್ಕ ಲೆಕ್ಕಾಚಾರ ಮಾಡತಕ್ಕದ್ದು.

**ವಿಶೇಷ ಸೂಚನೆ:-**

1. ನಿವೇಶನ / ಸ್ವತ್ತಿನ ಮೌಲ್ಯ ನಿರ್ಧರಣೆಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆಯಲ್ಲಿನ ಬೆಂಗಳೂರು ನಗರದ ಜಿಲ್ಲಾ ಉಪನೊಂದಣಿ ಕಛೇರಿಗಳ ವ್ಯಾಪ್ತಿಗೆ ಅನ್ವಯಿಸುವ ವಿಶೇಷ ಸೂಚನೆಗಳನ್ನು ಪಾಲಿಸುವುದು.
2. ಶುಲ್ಕ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ಜಿಲ್ಲಾ ಉಪನೊಂದಣಿ ಕಛೇರಿಗಳ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುವ ಅಧಿಸೂಚನೆಯಲ್ಲಿನ ಮಾರ್ಗಸೂಚಿ ದರಗಳು ಹಾಗೂ ವಿಶೇಷ ಸೂಚನೆಗಳನ್ನು ಅಳವಡಿಸಿಕೊಳ್ಳತಕ್ಕದ್ದು.

## ಅನುಬಂಧ-2

**ಸ್ವಾಧೀನಾನುಭವ ಪ್ರಮಾಣ ಪತ್ರ ಹಂತ**

| ಕ್ರಮ ಸಂಖ್ಯೆ | ಶುಲ್ಕಗಳ ವಿವರ (ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ) | ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಗಳಂತೆ ಪಾವತಿಸಿಕೊಳ್ಳಬೇಕಾದ ದಂಡ ಶುಲ್ಕಗಳ ದರ ಪ್ರತೀ ಚ.ಮೀ ಗೆ (ಮಾರ್ಗಸೂಚಿ ದರದ ಶೇಕಡಾವಾರು ಪ್ರಮಾಣ) ವಲಯ ನಿಮಾವಳಿ / ಕಟ್ಟಡ ಉಪವಿಧಿಗಳಲ್ಲಿ ಅನುಮತಿಸಬಹುದಾದ ಮಿತಿಯೊಳಗಿನ ಉಲ್ಲಂಘನೆಗಳು (ಮಂಜೂರಾತಿ ನಕ್ಷೆಗೆ) (ಪ್ರತಿ ಚ.ಮೀ ಗೆ) |
|---|---|---|
| 1 | 2 | 3 |
| 1 | ಏಕ ವಸತಿ ಘಟಕ | 0.55 % |
| 2 | ಎ) 2 ರಿಂದ 10 ಘಟಕಗಳು | 3.30 % |
| | ಬಿ) 11 ರಿಂದ 50 ಘಟಕಗಳು | 4.40 % |
| | ಸಿ) 51 ರಿಂದ 200 ಘಟಕಗಳು | 5.50 % |
| | ಡಿ) 200 ಘಟಕಗಳಿಗಿಂತ ಮೇಲ್ಪಟ್ಟು | 6.60 % |
| 3 | ವಾಣಿಜ್ಯ ಕಟ್ಟಡಗಳು | |
| | ಎ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ ವರೆಗೆ | 4.40 % |
| | ಬಿ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ ಗಿಂತ ಮೇಲ್ಪಟ್ಟು | 6.60 % |

| | | |
|---|---|---|
| 4 | ಕೈಗಾರಿಕ ಕಟ್ಟಡಗಳು | |
| | ಎ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ ವರೆಗೆ | 4.40 % |
| | ಬಿ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ ಗಿಂತ ಮೇಲ್ಪಟ್ಟು | 4.40 % |
| 5 | ಇತರೆ ಕಟ್ಟಡಗಳು (ಧಾರ್ಮಿಕ ಕಟ್ಟಡಗಳನ್ನು ಹೊರತುಪಡಿಸಿ) | |
| | ಎ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ ವರೆಗೆ | 2.20 % |
| | ಬಿ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ ಗಿಂತ ಮೇಲ್ಪಟ್ಟು | 3.30 % |
| 6 | ಅನುಮತಿಸಬಹುದಾದ ನಡುಜಾಗಗಳ ಮಿತಿಯಲ್ಲಿ ತಳ ಅಂತಸ್ತನ್ನು ಮಂಜೂರಾದ ನಕ್ಷೆಗಿಂತ ಹೆಚ್ಚುವರಿಯಾಗಿ ನಿರ್ಮಿಸಿರುವುದಕ್ಕೆ | 6.60 % |
| 7 | ಮೆಜನೈನ್ ಅಂತಸ್ತಿನಲ್ಲಿ ಅನುಮತಿಸಬಹುದಾದ ಮಿತಿಗಿಂತ ಮಂಜೂರಾದ ನಕ್ಷೆಗಿಂತ ಹೆಚ್ಚುವರಿಯಾಗಿ ನಿರ್ಮಿಸಿರುವ ಕಟ್ಟಡದ ವಿಸ್ತೀರ್ಣಕ್ಕೆ | 8.80 % |
| 8 | ಮೇಲ್ಛಾವಣಿ ಅಂತಸ್ತಿನಲ್ಲಿ ಮಂಜೂರಾದ ನಕ್ಷೆಗಿಂತ ಹೆಚ್ಚುವರಿಯಾಗಿ ಅನುಮತಿಸಬಹುದಾದ ಮಿತಿಯಲ್ಲಿ ನಿರ್ಮಿಸಿರುವ ಕಟ್ಟಡದ ಒಟ್ಟಾರೆ ವಿಸ್ತೀರ್ಣಕ್ಕೆ | 8.80 % |
| 9 | ಮಂಜೂರಾದ ನಕ್ಷೆಗೆ ಹೆಚ್ಚುವರಿಯಾಗಿ ಅನುಮತಿಸಬಹುದಾದ ಮಿತಿಯಲ್ಲಿ ತೆರೆದ ಬಾಲ್ಕನಿಯನ್ನು ನಿರ್ಮಿಸಿರುವುದಕ್ಕೆ | 6.60 % |
| 10 | ಪ್ರಾರಂಭಿಕ ಪ್ರಮಾಣಪತ್ರ ಪಡೆಯದೇ ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುವ ಕಟ್ಟಡದ ಭಾಗಕ್ಕೆ | 0.11 % |
| 11 | ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೇ ವಲಯ ನಿಯಮಾವಳಿ / ಉಪವಿಧಿಗಳ ಮಿತಿಯೊಳಗೆ ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುವ ಕಟ್ಟಡದ ಭಾಗಕ್ಕೆ | 0.17 % |
| 12 | ಸ್ವಾಧೀನಾನುಭವ ಪತ್ರಮಾಣ ಪತ್ರ ಪಡೆಯದೇ ಉಪಯೋಗಿಸುತ್ತಿರುವ ಕಟ್ಟಡದ ಭಾಗಕ್ಕೆ (ಸ್ವಾಧೀನಗೊಂಡಿರುವ ಕಟ್ಟಡದ ವಿಸ್ತೀರ್ಣಕ್ಕೆ) | 0.11 % |

**ಸೂಚನೆ:** ಮಾರ್ಗಸೂಚಿ ದರ "ಅಂದರೆ (ಶುಲ್ಕಗಳ ಲೆಕ್ಕಾಚಾರದ ಉದ್ದೇಶಕ್ಕಾಗಿ)

1. ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಸೆಕ್ಷನ್ 45 (ಬಿ) ಅಡಿಯಲ್ಲಿ ನಿರ್ದಿಷ್ಟ ನಿವೇಸನ / ಸ್ವತ್ತಿಗೆ ನಿಗಧಿಪಡಿಸಲಾದ ಹಾಲಿ ಚಾಲ್ತಿಯಲ್ಲಿರುವ ಚ.ಮೀ ಒಂದರ ಮಾರ್ಗಸೂಚಿ ದರ.
2. ದರ ನಿಗಧಿಪಡಿಸುವಲ್ಲಿ ಇರುವ ವಿಶೇಷ ಸೂಚನೆಗಳನ್ನು ಅಳವಡಿಸಿ ದರ ಪರಿಗಣಿಸುವುದು.
3. ಒಂದು ವೇಳೆ ನಿವೇಶನದ ಮಾರ್ಗಸೂಚಿ ದರ ಚ.ಮೀ ಒಂದಕ್ಕೆ ರೂ. 50,000/- ಗಳಿಗಿಂತ ಕಡಿಮೆ ಬಂದಲ್ಲಿ ಕನಿಷ್ಠ ರೂ. 50,000/- ಗಳನ್ನು ಚ.ಮೀ ಒಂದರ ಸ್ವತ್ತಿನ ಮಾರ್ಗಸೂಚಿ ದರವನ್ನಾಗಿ ಪರಿಗಣಿಸಿ ಅದರನ್ವಯ ಶುಲ್ಕ ಲೆಕ್ಕಾಚಾರ ಮಾಡತಕ್ಕದ್ದು.

**ವಿಶೇಷ ಸೂಚನೆ:-**

1. ನಿವೇಶನ / ಸ್ವತ್ತಿನ ಮೌಲ್ಯ ನಿರ್ಧರಣೆಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆಯಲ್ಲಿನ ಬೆಂಗಳೂರು ನಗರದ

| |
|---|
| ಜಿಲ್ಲಾ ಉಪನೋಂದಣಿ ಕಛೇರಿಗಳ ವ್ಯಾಪ್ತಿಗೆ ಅನ್ವಯಿಸುವ ವಿಶೇಷ ಸೂಚನೆಗಳನ್ನು ಪಾಲಿಸುವುದು.<br>2. ಶುಲ್ಕ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ಜಿಲ್ಲಾ ಉಪನೋಂದಣಿ ಕಛೇರಿಗಳ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುವ ಅಧಿಸೂಚನೆಯಲ್ಲಿನ ಮಾರ್ಗಸೂಚಿ ದರಗಳು ಹಾಗೂ ವಿಶೇಷ ಸೂಚನೆಗಳನ್ನು ಅಳವಡಿಸಿಕೊಳ್ಳತಕ್ಕದ್ದು. |

## ಅನುಬಂಧ-3

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಮಾಣ | ಶುಲ್ಕದ ದರ (ರೂ. ಗಳಲ್ಲಿ) |
|---|---|---|---|
| 1 | **ದೃಢೀಕರಿಸಿದ ನಕ್ಷೆಗಳ ಪ್ರತಿಗಳು** | | |
| | ಎ) ತಳ, ನೆಲ ಮತ್ತು ಮೇಲಿನ ಮೂರು ಅಂತಸ್ತುವರೆಗಿ ವಸತಿ ಕಟ್ಟಡಗಳ ಪ್ರತಿ ನಕ್ಷೆಗಳ ಪ್ರತಿಯೊಂದಕ್ಕೆ | ಪ್ರತಿ ಪ್ರತಿಗೆ | 50.00 |
| | ಬಿ) ಬಹುಮಹಡಿ ವಸತಿ ಕಟ್ಟಡಗಳ ನಕ್ಷೆಗಳ ಪ್ರತಿಗೆ ಪ್ರತಿ ಪ್ರತಿಗೆ | ಪ್ರತಿ ಪ್ರತಿಗೆ | 100.00 |
| | ಸಿ) ವಸತಿಯೇತರ ಕಟ್ಟಡಗಳ ನಕ್ಷೆಗಳ ಪ್ರತಿಗೆ ಪ್ರತಿ ಪ್ರತಿಗೆ | ಪ್ರತಿ ಪ್ರತಿಗೆ | 100.00 |
| 2 | ನಕ್ಷೆಗಳ ಪ್ರತಿಗಳು | ಪ್ರತಿ ಪ್ರತಿಗೆ | |
| | 1. ವಸತಿ ಮೊದಲ 5 ಪ್ರತಿಯವರೆಗೆ<br>6ನೇ ಯ ಹಾಗೂ ತದನಂತರದ ಪ್ರತಿಗಳಿಗೆ | ಪ್ರತಿ ಪ್ರತಿಗೆ<br>ಪ್ರತಿ ಪ್ರತಿಗೆ | 100.00<br>200.00 |
| | **2. ವಸತಿ ಸಮುಚ್ಛಯ ಹಾಗೂ ವಸತಿಯೇತರ ಕಟ್ಟಡಗಳಿಗೆ** | ಪ್ರತಿ ಪ್ರತಿಗೆ | |
| | 1. ಮೊದಲ 5 ಪ್ರತಿಯವರೆಗೆ<br>6ನೇ ಹಾಗೂ ತದನಂತರದ ಪ್ರತಿಗಳಿಗೆ ತಲಾ | ಪ್ರತಿ ಪ್ರತಿಗೆ<br>ಪ್ರತಿ ಪ್ರತಿಗೆ | 400.00<br>600.00 |
| 3 | **ಕಾಂಪೌಂಡ್ ಗೋಡೆ ನಿರ್ಮಿಸಲು ಶುಲ್ಕ** | ಪ್ರತಿ ಮೀಟರ್‌ಗೆ | 10.00 |

ಈ ಸುತ್ತೋಲೆ ಜಾರಿಗೊಂಡಿರುವ ದಿನದಿಂದ ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಸ್ವಾಧೀನಾನುಭವ ಪತ್ರವನ್ನು ನೀಡುವಾಗ ಮೇಲ್ಕಂಡ ದರಗಳನ್ನು ಅಳವಡಿಸಿಕೊಂಡು ಶುಲ್ಕ ಪಾವತಿ ಸೂಚನಾ ಪತ್ರಗಳನ್ನು ನೀಡಿ ಶುಲ್ಕಗಳನ್ನು ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ.

ಆಯುಕ್ತರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು

ಪ್ರತಿಯನ್ನು:-

1. ಮಾನ್ಯ ಅಧ್ಯಕ್ಷರು, ಬೆಂ.ಅ.ಪ್ರಾ., ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಲು ಆಪ್ತ ಶಾಖೆಗೆ ಕಳುಹಿಸಿದೆ.
2. ಆಯುಕ್ತರವರ ಆಪ್ತ ಶಾಖೆ, ಬೆಂ.ಅ.ಪ್ರಾ., ಬೆಂಗಳೂರು.
3. ಅಭಿಯಂತರ ಸದಸ್ಯರು, ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಆರ್ಥಿಕ ಸದಸ್ಯರು, ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
5. ನಗರ ಯೋಜಕ ಸದಸ್ಯರು, ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಅಭಿಯಂತರ ಅಧಿಕಾರಿ-1, 2, 3, 4 ಮತ್ತು 5 ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರು, ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
8. ತಾಂತ್ರಿಕ ಸಹಾಯಕರು-1, 2, 3, 4 ಮತ್ತು 5 ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9. ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರು, ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
10. ಎಲ್ಲಾ ಸಹಾಯಕ / ಕಿರಿಯ ಅಭಿಯಂತರರು, ಬೆಂ.ಅ.ಪ್ರಾ., ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11. ಕಛೇರಿ ಪ್ರತಿ.